# ಹಣದ ಮಹಿಮೆ

ವಿಜಯನಗರದ ಅರಸ ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿ ಒಂದು ದಿನ ಒಬ್ಬ ವೃದ್ಧ ಕೋಲೂರುತ್ತಾ ಬಂದು ದೀನನಾಗಿ ಅರಸನಲ್ಲಿ ವಿನಂತಿಸಿದ. 'ಪ್ರಭೂ, ನನ್ನ ಪತ್ನಿ ತೀರಿ ಹೋಗಿದ್ದು, ನನ್ನ ಮಗ ಹಾಗೂ ಸೊಸೆ ನನ್ನನ್ನು ತೀರಾ ಅಲಕ್ಷಿಸುತ್ತಿದ್ದಾರೆ. ಆಹಾರ, ನೀರು ಏನನ್ನೂ ಕೊಡದೇ ಸದಾ ಬಯ್ಯುತ್ತಿರುತ್ತಾರೆ. ನನಗೆ ನ್ಯಾಯ ಬೇಕು' ಎಂದ.

'ಯೋಚಿಸಬೇಡ, ನಾನು ನಿನ್ನ ಮಗ, ಸೊಸೆಯರನ್ನು ಕರೆಸಿ ಬುದ್ಧಿ ಹೇಳುತ್ತೇನೆ, ನೀನೀಗ ಹೋಗು' ಎಂದ ಅರಸ. ಅಲ್ಲಿಯೇ ಇದ್ದ ವಿಕಟಕವಿ, ಹಾಸ್ಯರತ್ನ ರಾಮಕೃಷ್ಣ 'ಪ್ರಭು, ಈ ವಿಷಯ ನನಗೆ ಬಿಡಿ. ನಾನು ಮತ್ತೊಂದು ರೀತಿಯಲ್ಲಿ ಬಗೆಹರಿಸುತ್ತೇನೆ. ಹೇಗೆಂಬುದನ್ನು ನಂತರ ನೋಡಿ' ಎಂದ. ರಾಜ ಒಪ್ಪಿಗೆಯಿಂದ ತಲೆಯಾಡಿಸಿದ. ರಾಮಕೃಷ್ಣ ಆ ಮುದುಕನನ್ನು ಹೊರಗೆ ಒಂದು ಮೂಲೆಗೆ ಕರೆದೊಯ್ದು ಗುಟ್ಟಾಗಿ ಏನನ್ನೋ ಕೊಟ್ಟು ಮಾಡಬೇಕಾದದ್ದನ್ನೆಲ್ಲ ಹೇಳಿಕೊಟ್ಟು ಮನೆಗೆ ಕಳಿಸಿದ.

ಮುಂದಿನ ಒಂದು ವಾರದಲ್ಲಿಯೇ ಆ ವೃದ್ಧ ಪುನಃ ರಾಜನ ಬಳಿ ಬಂದ. ಈ ಬಾರಿ ಅವನ ಮುಖದಲ್ಲಿ ಅಪೂರ್ವ ತೇಜಸ್ಸು. 'ಮಹಾರಾಜ, ಈಗ ಮಗ, ಸೊಸೆ ಹೊಟ್ಟೆ ತುಂಬಾ ಊಟ ಕೊಟ್ಟು ಅತೀವ ಪ್ರೀತಿಯಿಂದ ನನ್ನ ಸೇವೆ ಮಾಡುತ್ತಿದ್ದಾರೆ. ಇದಕ್ಕೆ ನಿಮ್ಮ ರಾಮಕೃಷ್ಣರಿಗೆ ನಾನು ಕೃತಜ್ಞ' ಎಂದ. ರಾಜನಿಗೆ



ಚಿತ್ರ: ಗಣೇಶ್ ಅರಳಿಕಟ್ಟಿ

ಸಖೇದಾಶ್ಚರ್ಯವಾಯಿತು.

'ಅಂತಹದ್ದೇನು ಮಾಡಿದಿರಿ ರಾಮಕೃಷ್ಣರೇ?' ಎಂದ ರಾಜನ ಮಾತಿಗೆ ನಸುನಕ್ಕ ರಾಮಕೃಷ್ಣ ಹೇಳಿದ 'ಏನೂ ಮಾಡಲಿಲ್ಲ ಮಹಾಪ್ರಭು, ನಾನು ಈ ಮುದುಕನಿಗೆ ಒಂದು ಪುಟ್ಟ ಚೀಲದಲ್ಲಿ ಇನ್ನೂರು ವರಹಗಳನ್ನು ಹಾಕಿಕೊಟ್ಟು ಮಗ, ಸೊಸೆ ಇಬ್ಬರೂ ಮನೆಯಲ್ಲಿದ್ದಾಗ ಕೋಣೆಯ ಬಾಗಿಲು ಹಾಕಿಕೊಂಡು ಪುನಃ ಪುನಃ ಎಣಿಸಲು ಹೇಳಿದ್ದೆ. ಮಗ, ಸೊಸೆ ಮನೆಯಲ್ಲಿರುವುದು ಗೊತ್ತೇ ಇಲ್ಲದಂತೆ ನಟಿಸಲು ಹೇಳಿದ್ದೆ. 2 ದಿನಕ್ಕೆ, ನಾಲ್ಕೈದು ಬಾರಿ ಈ ಮುದುಕ ವರಹಗಳನ್ನು ಝಣಝಣ ಶಬ್ದಗೈದಾಗ ಇವನ ಬಳಿ ಅಪಾರ ಹಣವಿದೆಯೆಂದು ಭಾವಿಸಿದ ಅವರು ಅವನ ಸಾವಿನ ನಂತರ ಅದು ಹೇಗಿದ್ದರೂ ತಮ್ಮದೇ ಎಂದು ಅಪಾರ ಪ್ರೀತಿ ತೋರಿಸುತ್ತಿದ್ದಾರೆ. ಈ ಕಕ್ಕುಲಾತಿಯ ಹಿಂದಿರುವುದು ಕಾಂಚಾಣವಷ್ಟೇ! ಅವನಾಗಲೇ ಆ ಹಣ ನನಗೆ ಹಿಂತಿರುಗಿಸಿಯಾಯಿತು'.

'ಮುಂದೆ ಇವನಲ್ಲಿ ಹಣವಿಲ್ಲವೆಂದು ಅವರಿಗೆ ತಿಳಿದರೆ'? ಎಂದ ರಾಜ.

'ತಿಳಿಯುವಷ್ಟರಲ್ಲಿ ಈ ಮುದುಕ ಇರಬೇಕಲ್ಲ ಈತನನ್ನು ನೋಡಿದರೆ ಇನ್ನು ಹೆಚ್ಚು ಕಾಲ ಆಯಸ್ಸಿದ್ದಂತಿಲ್ಲ, ಕೊನೆಗಾಲದಲ್ಲಿ ಸುಖಪಡಲಿ ಬಿಡಿ ಪ್ರಭು' ಎಂದ ತೆನಾಲಿ ರಾಮಕೃಷ್ಣನ ಮಾತಿಗೆ ಸಭಾಸದರೆಲ್ಲ ಕರತಾಡನಗೈದರು. ಅರಸ ಕೈತುಂಬಾ ಬಹುಮಾನ ನೀಡಿ ಗೌರವಿಸಿದ.

(ಸಂಗ್ರಹ) **ಕೆ.ಶ್ರೀನಿವಾಸರಾವ್, ಹರಪನಹಳ್ಳಿ**

# ಕನ್ನಡ ನುಡಿ



ಅ ಆ ಇ ಈ
ಅದ್ಭುತ ಅಕ್ಷರಗಳಿವು ಓದು ನೀ

ಉ ಊ ಋ ೠ
ಉತ್ತಮ ಸಾಕ್ಷರನಾಗಲು ಇವುಗಳೆ ತುಂತುರು

ಎ ಏ ಐ ಒ
ಎತ್ತರಕ್ಕೇರಲು ಕನ್ನಡವ ನೀ ಕಲಿಯೊ

ಓ ಔ ಅಂ ಅಃ
ಓದಿದರಿವುಗಳ ಜೇನಸವಿದಂತೆ ಆಹಾ!

ಕ ಖ ಗ ಘ ಙ
ಕನ್ನಡ ನುಡಿಯುವವನೆ ಧನ್ಯ

ಚ ಛ ಜ ಝ ಞ
ಚಲುವಿನ ನುಡಿಮುತ್ತಗಳಿವು ಎಲ್ಲೆಲ್ಲೂ ಮಾನ್ಯ

ಟ ಠ ಡ ಢ ಣ
ಟೊಂಕ ಕಟ್ಟಿ ಏಳ್ಗೆಗೆ ನಿಲ್ಲೋಣ

ತ ಥ ದ ಧ ನ
ತತ್ವದ ಸಾರಗಳಿವು ತಿಳಿಯಲಿ ಮನ

ಪ ಫ ಬ ಭ ಮ
ಪಠಿಸಲು ನೀನಾಗುವೆ ಸಾರ್ವಭೌಮ

ಯ ರ ಲ ವ
ಯಶಸ್ಸಿಗೆ ಕಲಿಯಲೇಬೇಕು ಕನ್ನಡವ

ಶ ಷ ಸ ಹ ಳ
ಶಾರದೆಗೆ ಇವೇ ಮುತ್ತು ರತ್ನ ಹವಳ

ಕ್ಷ ತ್ರ ಜ್ಞ
ಕ್ಷಿತಿಜದೊಳಗೂ ಕನ್ನಡವೆ ದೈವಜ್ಞ

**-ಗಣೇಶ ಬ. ಬಡಿಗೇರ, ಸರವಂದ**